**ಅಸಲು ದಾವೆ - 137/2019**

**ಪಿ. ಡಬ್ಲ್ಯೂ-1**

**ಇಂದು ದಿನಾಂಕ 25.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ಮಹಾದೇವ ರಾಠೋಡ ಅವರಿಗೆ 5 ಎಕರೆ ಜಮೀನು ಇತ್ತು. ಮಹಾದೇವ ರಾಠೋಡ ಅವರಿಗೆ ಅ ಜಮೀನು ಹಿರಿಯರಿಂದ ಬಂದ ಆಸ್ತಿ ಅಂದರೆ ನನಗೆ ಗೊತ್ತಿಲ್ಲ. ಮಹಾದೇವ ರಾಠೋಡ ಅವರಿಗೆ ಹೆಂಡತಿ , ಮಕ್ಕಳು ಇದ್ದಾರೆ ಅವರ ಹೆಸರು ವಿಜಯಲಕ್ಷ್ಮೀ. ಎರಡು ಜನ ಮಕ್ಕಳ ಹೆಸರು ನನಗೆ ಗೊತ್ತಿಲ್ಲ.

ಮಹಾದೇವ ರಾಠೋಡ ರವರು ನನಗೆ ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದು ಹೇಳಲಾದ ಮುಂಚೆ ಅಸಲು ದಾವೆ ನಂ 199/2007 ರಲ್ಲಿ ಎಲ್ಲ ಜಮೀನನ್ನು ತನ್ನ ಹೆಂಡತಿ, ಮಕ್ಕಳಿಗೆ ಬಿಟ್ಟುಕೊಟ್ಟಿದ್ದ ಅಂದರೆ ಸಾಕ್ಷಿಯು 1 ಎಕರೆ ಬಿಟ್ಟುಕೊಟ್ಟಿದ್ದ ಎಂದು ನುಡಿಯುತ್ತಾರೆ. ಮಹಾದೇವ ರಾಠೋಡರವರು ತನ್ನ ಹೆಂಡತಿ , ಮಕ್ಕಳನ್ನು ನೋಡಿಕೊಳ್ಳದೇ ಬಿಟ್ಟು ಬಿಟ್ಟಿದ್ದರಿಂದ ಅಸಲು ದಾವೆ ನಂ 199/2007 ನ್ನು ದಾಖಲಿಸದ್ದರು ಅಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ದಿ-28-05-2012 ರಂದು ಆ ದಾವೆ ಡಿಕ್ರಿ ಆಗಿ ತಲಾ ¼ ಭಾಗ ಆಗಿತ್ತು ಅಂದರೆ ನನಗೆ ಗೊತ್ತಿಲ್ಲ. ಆ ದಾವೆ ಇತ್ಯರ್ಥ ಆಗುವವರೆಗೆ ಒಟ್ಟು 5 ಎಕರೆ ಜಮೀನು ಮಹಾದೇವ ರಾಠೋಡರವರ ಹೆಸರಿನಲ್ಲಿ ಇತ್ತು ಅಂದರೆ ಸರಿ. ಆ ದಾವೆ ತೀರ್ಮಾನ ಆದ ನಂತರ ಮಹಾದೇವ ರಾಠೋಡರವರ ಹೆಂಡತಿ, ಮಕ್ಕಳು ಎಫ.ಡಿ.ಪಿ ನಂ-5/2009 ನ್ನು ದಾಖಲಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. ಆ ಎಫ. ಡಿ . ಪಿ ಯಲ್ಲಿ ಮಹಾದೇವ ರಾಠೋಡ ರವರ ಹೆಂಡತಿ ಮತ್ತು ಮಕ್ಕಳು 3 ಎಕರೆ 30 ಗುಂಟೆ ತಮ್ಮ ಭಾಗದ ಜಮೀನನ್ನು ಹಂಚಿಕೊಂಡಿದ್ದಾರೆ ಅಂದರೆ ಸರಿಯಲ್ಲ. ಅದೇ ರೀತಿ ಮಹಾದೇವ ರಾಠೋಡ ರವರಿಗೆ 1 ಎಕರೆ 10 ಗುಂಟೆ ಬಂದಿತ್ತು ಅಂದರೆ ಸರಿಯಲ್ಲ. ಮೊದಲೇ ಮಹಾದೇವ ರಾಠೋಡ ರವರು ತನ್ನ ಹೆಸರಿ ಿಗ 3 ಎಕರೆ 30 ಗುಂಟೆ ಜಮೀನು ಇಟುಟಕೊಂಡು ಹೆಂಡತಿ , ಮಕ್ಕಳಿಗೆ 1 ಎಕರೆ 10 ಗುಂಟೆ ನೀಡಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮಹಾದೇವ ರಾಠೋಡ ರವರು ತನ್ನ ಹೆಸರಿಗೆ 3 ಎಕರೆ 30 ಗುಂಟೆ ಜಮೀನು ಬಿಟ್ಟುಕೊಟ್ಟು ತನ್ನ ಹೆಂಡತಿ , ಮಕ್ಕಳ ಹೆಸರಿಗೆ 1 ಎಕರೆ 10 ಗುಂಟೆ ನೀಡಿದ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಅಸಲು ದಾವೆ ನಂ -199/2007 ಮತ್ತು ಎಫ .ಡಿ. ಪಿ ನಂ-5/2009 ರಲಿ ಆದೇಶವಾದ ನಂತರ ನಾನು ಮತ್ತು ಮಹಾದೇವ ರಾಠೋಡ ರವರು ಮಿಲಾಪಿ ಆಗಿ ಸುಳ್ಳು ಕ್ರಯದ ಕರಾರು ಪತ್ರ ಮಾಡಿದ್ದೇವೆ ಅಂದರೆ ಸರಿಯಲ್ಲ. ಮಹಾದೇವ ರಾಠೋಡ ರವರು ಕುಡಿತದ ಕೆಟ್ಟ ಚಟಕ್ಕೆ ಬಲಿ ಆಗಿದ್ದನ್ನು ದುರುಪಯೋಗಪಡಿಸಿಕೊಂಡು ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಕ್ರಯದ ಕರಾರು ಪತ್ರ ಬರೆಸಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಎಫ .ಡಿ. ಪಿ ನಂ 5/2009 ದಿ-25-06-2012 ರಂದು ಇತ್ಯರ್ಥವಾಗಿದೆ ಅಂದರೆ ನನಗೆ ಗೊತ್ತಿಲ್ಲ. ಈ ಹಿಂದೆ ಆಗಿರುವ ನ್ಯಾಯಾಲಯದ ಆದೇಶ ನನಗೆ

ಗೊತ್ತಿದ್ದರೂ ಸಹ ಪ್ರತಿವಾದಿಯರನ್ನು ವಿಚಾರಿಸದೇ ಸುಳ್ಳು ಕ್ರಯದ ಕರಾರು ಪತ್ರ ಬರೆದಿದ್ದೇನೆ ಅಂದರೆ ಸರಿಯಲ್ಲ. ಎಂ. ಆರ. ನಂ- ಹೆಚ -194-2013-2014 ಮುಟೇಷನಗೂ ಅಂತಿಮ ಡಿಕ್ರಿ ಪ್ರಕ್ರಿಯೇ ಆದ ನಂತರ ಆಗಿದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದು ಮಹಾದೇವರವರು ಮೃತಪಟ್ಟ ನಂತರ ಆಗಿದೆ ಎಂದು ನುಡಿಯುತ್ತಾರೆ. ಮಹಾದೇವ ರಾಠೋಡರವರ ಹೆಸರಿಗೆ ಬಂದ ಜಮೀನು ಈಗ ಯಾರ ಹೆಸರಿಗೆ ಇದೆ ನನಗೆ ಗೊತ್ತಿಲ್ಲ. ಮಹಾದೇವ ರಾಠೋಡ ರವರು 2018 ರಲ್ಲಿ ಮೃತಪಟ್ಟಿದ್ದಾರೆ. ನನಗೆ ಕರಾರು ಬರೆದುಕೊಟ್ಟಿದ್ದಾರೆ ಎಂದು ಹೇಳಿದ ಸಂದರ್ಭದಲ್ಲಿ ಮಹಾದೇವ ರಾಠೋಡ ರವರಿಗೆ ದಾವಾ ಸ್ವತ್ತನ್ನು ಕ್ರಯಕ್ಕೆ ನೀಡುವ ಹಕ್ಕು ಇರಲಿಲ್ಲ ಅಂದರೆ ಸರಿಯಲ್ಲ. ಅಂತಿಮ ಡಿಕ್ರಿಯಂತೆ ಪೋಡಿ ಆಗಿದೆ ಅಂದರೆ ಸರಿಯಲ್ಲ. ಮಹಾದೇವ ರಾಠೋಡ ರವರು ತನ್ನ ಹೆಸರಿಗೆ ಇದ್ದ 1 ಎಕರೆ 10 ಗುಂಟೆ ಜಮೀನನ್ನು ಉಸ್ಮಾನ ಗಣಿ ಅವರಿಗೆ ಮಾರಾಟ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಆ ಕ್ರಯ ಪತ್ರ ನೊಂದಣಿ ಕಚೇರಿಯಲ್ಲಿ ನೊಂದಣಿ ಆಗಿದೆ ಅದರಂತೆ ಮುಟೇಷನ ಆಗಿದೆ ಅಂದರೆ ನನಗೆ ಗೊತ್ತಿಲ್ಲ.

ಮಹಾದೇವ ರಾಠೋಡ ರವರು ನನಗೆ ಕ್ರಯದ ಕರಾರು ಬರೆದುಕೊಡುವಾಗ ನಾನು ಆತನ ಹೆಸರಿಗೆ ಇರುವ 3 ಎಕರೆ 30 ಗುಂಟೆ ಜಮೀನಿನ ಪಹಣಿ ನೋಡಿಲ್ಲ. ಆದರೆ 5 ಎಕರೆ ಜಮೀನಿನ ಪಹಣಿ ನೋಡಿದ್ದೇನೆ. ಮಹಾದೇವ ರಾಠೋಡ ರವರ ಜೀವಿತ ಕಾಲದಲ್ಲಿ ಏಕೆ ದಾವೆ ಸಲ್ಲಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಕರಾರು ಪತ್ರ ಮಾಡಿಕೊಂಡಿದಾಗಿನಿಂದಲೂ ಆಗಾಗ ಆತನನ್ನು ಕೇಳಿದಾಗ ಸ್ವಲ್ಪ ತಂಟೆ ನಡೆದಿದೆ ಆಮೇಲೆ ಮಾಡಿಕೊಡುತ್ತೇನೆ ಎಂದು ಹೇಳಿದ್ದ ಎಂದು ನುಡಿಯುತ್ತಾರೆ. ಯಾವ ತಂಟೆ ನಡೆದಿದೆ ಎಂದು ನನಗೆ ಹೇಳಿರಲಿಲ್ಲ. ದಾವೆ ಸಲ್ಲಿಸುವ ಮುಂಚೆ 2013 ರಿಂದ 2015 ರ ಅವಧಿನ ವರೆಗಿನ ದಾವಾ ಜಮೀನಿನ ಪಹಣಿ ತಗೆದು ನೋಡಿರಲಿಲ್ಲ. ಮಹಾದೇವ ರಾಠೋಡ ರವರು ನನಗೆ ಕರಾರು ಬರೆದುಕೊಡುವಾಗ ದಾವಾ ಸ್ವತ್ತಿನ ಪ್ರತ್ಯೇಕ ನಕ್ಷೆ ಮಾಡಿಸಿದ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿದ ಬಗ್ಗೆ ನಮ್ಮ ವಕೀಲರಿಗೆ ಗೊತ್ತು. ಆ ಸಂದರ್ಭದಲ್ಲಿ ಪ್ರತ್ಯೇಕ ನಕ್ಷೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ದಾವೆ ಕಾಲಮಿತಿಯಿಂದ ಬಾಧಕವಾಗಿದೆ ಅಂದರೆ ಸರಿಯಲ್ಲ. ಮಹಾದೇವ ರಾಠೋಡ ಅವರಿಗೆ ಯಾವ ಅಡಚಣೆ ಇತ್ತು ಎಂದು ನನಗೆ ಗೊತ್ತಿಲ್ಲ. ಹಾಗಾಗಿ ಕ್ರಯದ ಕರಾರು ಪತ್ರದಲ್ಲಿ ಬರೆದಿಲ್ಲ. ಈ ದಾವೆ ಸಲ್ಲಿಸಲು ಯಾವುದೇ ಕಾರಣ ಇಲ್ಲದಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಮಹಾದೇವ ರಾಠೋಡ ರವರು ಮೃತಪಟ್ಟ ನಂತರ ಪ್ರತಿವಾದಿಯರ ವಿರುದ್ಧ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಕೇಳಿದಂತೆ ಪರಿಹಾರ ನೀಡಲು ಪ್ರತಿವಾದಿಯರು ಬಾಧ್ಯಸ್ಥರಲ್ಲ ಅಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ.ಸಿ**
**ಇಂಡಿ.**